# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.324–2018** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಡಿ.ಪಿ.ಮಹದೇವಮೂರ್ತಿ<br>ದೇವನೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 17–11–2022. |

**ಮುಂದುವರೆದ ಪಾಟೀ ಸವಾಲುಃ  ಶ್ರೀ ಎಸ್.ಬಿ.ಸಿ  ವಕೀಲರಿಂದಃ**

5. ನಾನು ಹಾಜರುಪಡಿಸಿರುವ ನಿಪಿ–7 ಮತ್ತು 8 ರಲ್ಲಿ ಇರುವ ಚೆಕ್ಕುಬಂದಿ ಸರಿ ಇರುತ್ತದೆ. ಸದರಿ ಚೆಕ್ಕುಬಂದಿಗೆ ಒಳಪಟ್ಟ ಆಸ್ತಿಯನ್ನು ಪುಟ್ಟಮಾದಪ್ಪನವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪುಟ್ಟಮಾದಪ್ಪನವರಿಗೆ ಚಿನ್ನಮ್ಮ ಹೆಂಡತಿಯಾಗಬೇಕು, ಗೌರಮ್ಮ ತಂಗಿ ಆಗಬೇಕು. ದಿ.27–11–1974 ರಲ್ಲಿ ಸರ್ವೆ ನಂಬರ್ 365/10 ರ ಒಟ್ಟು ವಿಸ್ತೀರ್ಣದ ಪೈಕಿ ಪುಟ್ಟಮಾದಪ್ಪನವರು ನನ್ನ ಅತ್ತೆಯಾದ ಗೌರಮ್ಮನವರಿಗೆ 0.2 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಸದರಿ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆಯವರು 0.2 ಗುಂಟೆ ಸ್ವತ್ತನ್ನು ನನ್ನ ಅತ್ತೆಯವರಾದ ಗೌರಮ್ಮನವರಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನಾನು ನನ್ನ ದಾವಾದಲ್ಲಿ ಹೇಳಿರುವುದಿಲ್ಲ. ಆ ರೀತಿ ನನ್ನ ವಾದ ಪತ್ರದಲ್ಲಿ ಹೇಳಲು ಹಾಗೂ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಡಿ–5 ಅನ್ನು ತೋರಿಸಿ ಪೋಟೋದಲ್ಲಿ ಯಾವ ದಿಕ್ಕಿನಲ್ಲಿ ದಾರಿ ಇದೆ ಎಂಬ ಪ್ರಶ್ನೆಗೆ ಪೂರ್ವ ದಿಕ್ಕಿನಲ್ಲಿ ದಾರಿ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ–4 ಅನ್ನು ತೋರಿಸಿ ನಿಡಿ–4 ರ ಭಾವ ಚಿತ್ರದಲ್ಲಿ ತೋರಿಸಿ ಯಾವ ದಿಕ್ಕಿಗೆ ನಿಮ್ಮ ಮನೆ ಎಂಬ ಪ್ರಶ್ನೆಗೆ ಸಾಕ್ಷಿ ಪೂರ್ವ ದಿಕ್ಕಿಗೆ ಇದೆ ಎಂದು ನುಡಿಯುತ್ತಾರೆ. ಸದರಿ ಪೋಟೋದಲ್ಲಿ ನನ್ನ ಮನೆಯ ಪಕ್ಕಕ್ಕೆ ಕಾಣುತ್ತಿರುವ ಮತ್ತೊಂದು ದಾರಿಯೂ ಯಾವ ದಿಕ್ಕಿಗೆ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಪೂರ್ವ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ–7 ಮತ್ತು 8 ನಾನು ಪೋಟೋದಲ್ಲಿ ತೋರಿಸುತ್ತಿರುವ ಮನೆಗೆ ಸಂಬಂಧಪಟ್ಟವು ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ–7 ರಲ್ಲಿ ಪೂರ್ವಕ್ಕೇ–ಚಿನ್ನಮ್ಮನವರ ಮನೆ, ಪಶ್ಚಿಮಕ್ಕೇ– ನೀರು

ಹರಿಯುವ ಹಳ್ಳ, ಉತ್ತರಕ್ಕೆ–ಕೆಂಪಯ್ಯನ ಗುರುಸಿದ್ಧಪ್ಪನವರ ಸ್ವತ್ತು ಹಾಗೂ ದಕ್ಷಿಣಕ್ಕೆ– ರಸ್ತೆ ಎಂದು ನಮೂದು ಇದ್ದು, ನಿಪಿ–7 ರಲ್ಲಿ ಹೇಳಿರುವ ಚೆಕ್ಕುಬಂದಿ ಸರಿ ಇದೆಯೋ ಅಥವಾ ಫೋಟೋದಲ್ಲಿ ಕಾಣುತ್ತಿರುವುದು ಸರಿ ಇದೆಯೋ ಎಂಬ ಪ್ರಶ್ನೆಗೆ ನಿಪಿ–7 ರಲ್ಲಿ ಇರುವ ಚೆಕ್ಕುಬಂದಿ ಸರಿ ಇದೆ ಎಂದು ನುಡಿಯುತ್ತಾರೆ.

6. ಸ್ವತ್ತಿನ ಸಂ.535/11 ರ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ–ಗುರುಸಿದ್ಧಪ್ಪನವರ ಜಾಗ, ಪಶ್ಚಿಮಕ್ಕೆ–ಗೌರಮ್ಮನವರ ನಿವೇಶನ, ಉತ್ತರಕ್ಕೆ– ಕೆಂಪಯ್ಯನ ಗುರುಸಿದ್ಧಪ್ಪನವರ ಸ್ವತ್ತು ಹಾಗೂ ದಕ್ಷಿಣಕ್ಕೆ– ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ತೋರಿಸುತ್ತಿರುವ ನಿಡಿ–2 ರಲ್ಲಿ ಕಾಣುತ್ತಿರುವ ಸ್ವತ್ತು ಸ್ವತ್ತಿನ ಸಂ.535/11 ಕ್ಕೆ ಸಂಬಂಧಿಸಿದ್ದಾಗಿರುತ್ತದೆ. ನಿಡಿ–2 ರಲ್ಲಿ ಕಾಣುತ್ತಿರುವುದು ರಸ್ತೆ ಎಂದರೆ ಸಾಕ್ಷಿ ಸದರಿ ಸ್ವತ್ತು ನನಗೆ ಸೇರಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ–5 ಅನ್ನು ತೋರಿಸಿ ನಿಡಿ–5 ರಲ್ಲಿ ಕಾಣುತ್ತಿರುವ ರಸ್ತೆಯಂತೆ ಕಾಣುತ್ತಿರುವ ಪೂರ್ಣ ಸ್ವತ್ತು ನನಗೆ ಸೇರಿದ್ದಾಗಿರುತ್ತದೆ. ನಿಡಿ–5 ರಲ್ಲಿ ಕಾಣುತ್ತಿರುವ ಕಾಂಪೌಂಡ್ ಗುರುಸಿದ್ಧಪ್ಪನವರಿಗೆ ಸೇರಿದ್ದಾಗಿರುತ್ತದೆ. ನಿಡಿ–5 ರಲ್ಲಿ ಮುಂದುವರೆದು ರಸ್ತೆ ಕಾಣುತ್ತಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಾಗವೂ ಸಹ ನನಗೆ ಸೇರಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ–4 ರಲ್ಲಿ ಮತ್ತೊಂದು ಅಡ್ಡ ರಸ್ತೆ ಕಾಣುತ್ತಿರುತ್ತದೆ ಎಂದರೆ ಸಾಕ್ಷಿ ಅದು ದಕ್ಷಿಣಕ್ಕೆ ಇರುವ ರಸ್ತೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ಸ್ಥಳದಲ್ಲಿ ಇರುವ ವಾಸ್ತವಾಂಶಕ್ಕೆ ವಿರುದ್ಧವಾದ ದಾಖಲಾತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ಸಾರ್ವಜನಿಕ ರಸ್ತೆಯನ್ನು ತೋರಿಸಿಕೊಂಡು ದಾವಾ ಷೆಡ್ಯೂಲ್ ಸ್ವತ್ತನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. 1974 ರ ಕ್ರಯ ಪತ್ರವನ್ನು ಹಾಜರುಪಡಿಸಿದ ಪಕ್ಷದಲ್ಲಿ ನಿಜಾಂಶ ಹೊರಬರುತ್ತದೆ ಎಂದು 1974 ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–7 ಮತ್ತು 8 ರ ದಾಖಲೆಗಳು ನಿಡಿ–2 ರಿಂದ 5 ರವರೆಗಿನ ದಾಖಲೆಗಳಿಗೆ ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಆದುದ್ದರಿಂದ ನಾನು ಪ್ರತಿವಾದಿಯ ವಿರುದ್ಧ ಕೋರಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**